# ಕರ್ನಾಟಕ ಪರೀಕ್ಷಾ ಪ್ರಾಧಿಕಾರ
# Karnataka Examinations Authority


ಸಂಖ್ಯೆ: ಇಡಿ/ಕೆಇಎ/ಯುಜಿಸಿಇಟಿ/2023 ದಿನಾಂಕ: 26-10-2023

(ದಿನಾಂಕ 19-10-2023 ರ ಸುತ್ತೋಲೆ ಮುಂದುವರಿದಿದೆ.)

ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಲಭ್ಯವಿರುವ ಇಂಜಿನಿಯರಿಂಗ್ ಸೀಟುಗಳು ಹಾಗು ಎರಡನೇ ಮುಂದುವರಿದ ಸುತ್ತಿನ ಸೀಟು ಹಂಚಿಕೆಯ ನಂತರ ಖಾಲಿಯಾಗಿರುವ ವೆಟರಿನರಿ / ಫಾರ್ಮ್ ಸೈನ್ಸ್ / ಆರ್ಕಿಟೆಕ್ಚರ್ ಕೋರ್ಸುಗಳ ಪ್ರವೇಶಾತಿಗೆ ವಿಶೇಷ ಸುತ್ತಿನ ಸೀಟು ಹಂಚಿಕೆ

**(2023ನೇ ಸಾಲಿನಲ್ಲಿ ಯಾವುದೇ ಕೋರ್ಸಿಗೆ ಸೀಟು ಹಂಚಿಕೆ ಮಾಡಿಕೊಳ್ಳದಿರುವವರಿಗೆ ಮಾತ್ರ)**

1. ಭಾರತದ ಘನ ಸರ್ವೋಚ್ಛ ನ್ಯಾಯಾಲಯವು 2023ನೇ ಸಾಲಿನ ಇಂಜಿನಿಯರಿಂಗ್ ಕೋರ್ಸುಗಳಿಗೆ ಪ್ರವೇಶಾತಿ ದಿನಾಂಕವನ್ನು 30-10-2023 ರ ವರೆಗೆ ವಿಸ್ತರಿಸಿರುವ ಆದೇಶದ ಹಿನ್ನಲೆಯಲ್ಲಿ, ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಲಭ್ಯವಿರುವ ಇಂಜಿನಿಯರಿಂಗ್ ಸೀಟು ಹಂಚಿಕೆಯನ್ನು ಪ್ರಾಧಿಕಾರದಲ್ಲಿ ದಿನಾಂಕ 30-10-2023 ರಂದು ನಡೆಸಲಾಗುವುದು ಎಂದು ವೆಬ್‌ಸೈಟಿನಲ್ಲಿ ಪ್ರಕಟಿಸಿರುವ 19-10-2023 ರ ಸುತ್ತೋಲೆಯಲ್ಲಿ ಸೂಚಿಸಲಾಗಿರುತ್ತದೆ.
2. ಇದಕ್ಕೆ ಮುಂದುವರಿದಂತೆ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಲಭ್ಯವಿರುವ ಇಂಜಿನಿಯರಿಂಗ್ ಸೀಟುಗಳ ಜೊತೆಯಲ್ಲಿ ಎರಡನೇ ಮುಂದುವರಿದ ಸುತ್ತಿನ ಸೀಟು ಹಂಚಿಕೆಯ ನಂತರ ರದ್ದು ಪಡಿಸಿಕೊಂಡಿರುವ / ಪ್ರವೇಶ ಪಡೆಯದೇ ಇರುವ ಖಾಲಿ ಸೀಟುಗಳು ಎಂದು ಗುರುತಿಸಲ್ಪಟ್ಟ ವೆಟರಿನರಿ / ಫಾರ್ಮ್ ಸೈನ್ಸ್ / ಆರ್ಕಿಟೆಕ್ಚರ್ ಸೀಟುಗಳನ್ನು ಈ ವಿಶೇಷ ಸುತ್ತಿನಲ್ಲಿ ಹಂಚಿಕೆಗೆ ಪರಿಗಣಿಸಲಾಗುವುದು ಹಾಗು ದಿನಾಂಕ 27-10-2023 – ಮಧ್ಯಾಹ್ನ 1.00 ರಿಂದ ಇಚ್ಚೆ / ಆಯ್ಕೆಗಳನ್ನು ದಾಖಲಿಸಲು ಆನ್‌ಲೈನ್ ಪೋರ್ಟಲ್‌ಅನ್ನು ತೆರೆಯಲಾಗುವುದು. ಇಚ್ಚೆ / ಆಯ್ಕೆಗಳನ್ನು ದಾಖಲಿಸಲು 29-10-2023 ರ ಬೆಳಿಗ್ಗೆ 10.00 ರ ವರೆಗೆ ಕಾಲಾವಕಾಶವಿರುತ್ತದೆ.
3. ಇಲ್ಲಿಯವರೆಗೆ 2023ನೇ ಸಾಲಿನಲ್ಲಿ ಯಾವುದೇ ಸೀಟುಗಳನ್ನು ಪ್ರಾಧಿಕಾರದ ಮೂಲಕ ಹಂಚಿಕೆ ಮಾಡಿಕೊಳ್ಳದಿರುವ ಆಸಕ್ತ ಅರ್ಹ ಅಭ್ಯರ್ಥಿಗಳು ಪೋರ್ಟಲ್ ನಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಸೀಟುಗಳ ಲಭ್ಯತೆ, ವೆಟರಿನರಿ / ಫಾರ್ಮ್ ಸೈನ್ಸ್ / ಆರ್ಕಿಟೆಕ್ಚರ್ ಸೀಟುಗಳ ಲಭ್ಯತೆಯನ್ನು ಗಮನಿಸಿ ನಂತರ ತಮ್ಮ ಇಚ್ಚೆ / ಆಯ್ಕೆಗಳನ್ನು ಆದ್ಯತೆಯ ಮೇರೆಗೆ ದಾಖಲಿಸಬಹುದಾಗಿರುತ್ತದೆ.
4. ವಿಶೇಷ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶವನ್ನು 29-10-2023 ರ ಸಂಜೆ 6.00 ಗಂಟೆಯ ನಂತರ ಪ್ರಕಟಿಸಲಾಗುವುದು.
5. ವಿಶೇಷ ಸುತ್ತಿನಲ್ಲಿ ಸೀಟು ಹಂಚಿಕೆಯಾದ ಅಭ್ಯರ್ಥಿಗಳು ದಿನಾಂಕ 30-10-2023ರಂದು ಚಲನ್ ಡೌನ್‌ಲೋಡ್ ಮಾಡಿಕೊಂಡು ಶುಲ್ಕವನ್ನು ಪಾವತಿಸಿ, ಪ್ರವೇಶ ಆದೇಶವನ್ನು ಡೌನ್‌ಲೋಡಿ ಮಾಡಿಕೊಂಡು 30-10-2023 ರಂದೇ ಕಾಲೇಜಿನಲ್ಲಿ ಪ್ರವೇಶ ಪಡೆಯತಕ್ಕದ್ದು. (Deemed Admission)
6. ಉಳಿದಂತೆ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಮಾಹಿತಿ ಲಭ್ಯವಿರುವಂತೆ ಖಾಲಿ ಇರುವ ಇಂಜಿನಿಯರಿಂಗ್ ಸೀಟುಗಳನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಿರುವ ಸಂಬಂಧಿಸಿದ ಇಂಜಿನಿಯರಿಂಗ್ ಕಾಲೇಜುಗಳನ್ನು ನೇರವಾಗಿ ಸಂಪರ್ಕಿಸಿ ಸರ್ಕಾರಿ ಕೋಟದ ಶುಲ್ಕವನ್ನು ಪಾವತಿಸಿ ಇಂಜಿನಿಯರಿಂಗ್ ಸೀಟನ್ನು 30-10-2023 – ಸಂಜೆ 5.30 ರೊಳಗಾಗಿ ಪಡೆಯಬಹುದಾಗಿದೆ.

ಕಾರ್ಯನಿರ್ವಾಹಕ ನಿರ್ದೇಶಕರು


18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012

18th Cross, Sampige Road, Malleshwaram, Bengaluru - 560 012.

Phone: 080 - 23 564 583, 23 460 460, 23 361 786, Fax: 080 - 23 461 576

e-mail : keauthority-ka@nic.in Website : http://kea.kar.nic.in